**ಸಾಕ್ಷಿಯನ್ನು ದಿಃ 29.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಃ5 ರ ಪರ ಶ್ರೀ ಕೆ.ಜೆ.ಆರ್ ವಕೀಲರಿಂದಃ**

ನಾನು ಹಾಗೂ ಪ್ರತಿವಾದಿಯರು ಒಂದೇ ಊರಿನವರು ಎಂದರೆ ಸರಿ. ಪ್ರತಿವಾದಿ ನಂಃ5 ರವರ ಪರಿಚಯ ಸುಮಾರು 30 ವರ್ಷದಿಂದ ಇದೆ. ಸದರಿ ದಾವೆಯಲ್ಲಿ ಪ್ರತಿವಾದಿ ನಂಃ5 ರವರನ್ನು ಹೊರತು ಪಡಿಸಿ ಬೇರೆ ಯಾರೂ ತಕರಾರು ಹಾಕಿಲ್ಲ ಎಂದರೆ ಸರಿ. ಪ್ರತಿವಾದಿ ನಂಃ1 ರಿಂದ 4 ರವರು ಆರೋಗ್ಯವಾಗಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ನಂಃ4 ರವರು ತೀರಿಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ಸದರಿಯವರು ಸುಮಾರು 5 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ತೀರಿಕೊಂಡಿರುವ ವಿಷಯವನ್ನು ನಾವು ಮಾನ್ಯ ನ್ಯಾಯಾಲಯಕ್ಕೆ ತಿಳಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿ ಸರ್ವೆ ನಂಃ3/2 ರ ವಿಸ್ತೀರ್ಣವನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ವಿಸ್ತೀರ್ಣ 1 ಎಕರೆ 12 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ 1 ಎಕರೆ 12 ಗುಂಟೆಯಲ್ಲಿ ನಾವು 20 ಗುಂಟೆಗೆ ಸಂಬಂಧಿಸಿದಂತೆ ದಾವೆ ಹೂಡಿದ್ದೇವೆ ಎಂದರೆ ಸರಿ. ಸದರಿ ಸರ್ವೆ ನಂಬರ್ ಆದ ಇನ್ನುಳಿದ 20 ಗುಂಟೆ ಪ್ರತಿವಾದಿ ನಂಃ4 ರವರಿಗೆ ಹೋಗಿರುತ್ತದೆ ಎಂದರೆ ಸರಿ. ಸದರಿ ಸಂಗತಿಯನ್ನು ನಾನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿಯನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಯಾವ ಯಾವ ಆಸ್ತಿಗಳು ಇರುತ್ತವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪಾಪದಾಸರಿ ನನ್ನ ತಾತನಾಗಬೇಕು. ಪಾಪದಾಸರಿಗೆ ರಘುಪತಿ, ಚಿನ್ನಪ್ಪ, ಪ್ರತಿವಾದಿ ನಂಃ4, ಮುನಿಯಪ್ಪ ಉರುಫ್ ಗುಂಡಪ್ಪ ಎಂತ 4 ಜನ ಮಕ್ಕಳು ಎಂದರೆ ಸರಿ. ರಘುಪತಿ ದಾಸರಿ ಮಗ ಗಂಗಪ್ಪ ಎಂದರೆ ಸರಿ. ಚಿನ್ನಪ್ಪ ರವರ ಮಗ ಪ್ರತಿವಾದಿ ನಂಃ3 ಎಂದರೆ ಸರಿ. ಮುನಿಯಪ್ಪ ಉರುಫ್ ಗುಂಡಪ್ಪ ಇವರಿಗೆ ನಾನು ಪ್ರತಿವಾದಿ ನಂಃ1 ಮತ್ತು 2 ಮಕ್ಕಳು ಎಂದರೆ ಸರಿ.

ಸದರಿ ದಾವೆಯನ್ನು ನರಸಿಂಹಪ್ಪ ಅವರು ನಮಗೆ ಆಸ್ತಿ ಕೊಟ್ಟಿಲ್ಲ ಅಂತ ಹೇಳಿ ಸದರಿ ದಾವೆಯನ್ನು ಹೂಡಿದ್ದೇವೆ. ಸದರಿ ದಾವೆಯಲ್ಲಿ ಪ್ರತಿವಾದಿ ನಂಃ5 ರವರು ಏನು ತಕರಾರು ಹಾಕಿದ್ದಾರೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಸಾಕ್ಷಿಗೆ ಒಂದು ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸದರಿ ಪಹಣಿ ಪತ್ರಿಕೆಯು ಸರ್ವೆ ನಂಃ10/2 ಆಗಿದ್ದು ಹಾಗೂ ಅದರ ಕಲಂ 9 ರಲ್ಲಿ ಪಾಪದಾಸರಿ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ರಘುಪತಿ ದಾಸರಿ ರವರ ಮಗನಾದ ಗಂಗಪ್ಪ ಇವರು ನನಗೆ ಅಣ್ಣನಾಗಬೇಕು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಎಂ.ಇ ನಂಃ59/1992-93 ಆಗಿದ್ದು, ಸದರಿ ಎಂ.ಇ ಪ್ರಕಾರ ರಘುಪತಿ ದಾಸರಿ ಇವರ ಮಗನಾದ ಗಂಗಪ್ಪ ಇವರ ಪರವಾಗಿ ಮ್ಯುಟೇಷನ್ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ ಡಿ 2 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಇ.ಸಿ ಆಗಿದ್ದು, ಸದರಿ ಇ.ಸಿ ಯಲ್ಲಿ ಟಿ.ಆರ್ ಗಂಗಪ್ಪ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ ಡಿ 3 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ಸದರಿ ದಾಖಲಾತಿಯ ಪ್ರಕಾರ ನಮ್ಮ ಕುಟುಂಬದ ಸದಸ್ಯರು ಚಿನ್ನಪ್ಪನ ಹೆಸರಿಗೆ ದಾವಾ ಆಸ್ತಿ ಮ್ಯುಟೇಷನ್ ಆಗಬಹುದು ಎಂದು ಹೇಳಿ ತಮ್ಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಚಿನ್ನಪ್ಪ ರವರು ತೀರಿಕೊಂಡ ನಂತರ ಅವರ ಮಗನಾದ ಪ್ರತಿವಾದಿ ನಂಃ3 ರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿ ನಂಃ5 ರವರ ಪರವಾಗಿ ಖರೀದಿ ಕರಾರು ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ.

ಸದರಿ ಖರೀದಿ ಕರಾರು ಆಧಾರದ ಮೇಲೆ ಪ್ರತಿವಾದಿ ನಂಃ5 ರವರು ಪ್ರತಿವಾದಿ ನಂಃ3 ರವರ ವಿರುದ್ಧ ದಾವೆಯನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ನಂಃ91/2007 ರ ಬಗ್ಗೆ ನನಗೆ ಪ್ರತಿವಾದಿ ನಂಃ3 ರವರು ಹೇಳಿರುತ್ತಾರೆ. ಅಸಲು ದಾವಾ ನಂಃ91/2007 ಜಡ್ಜ್ ಮೆಂಟ್

ಪ್ರಕಾರ ಮುಂಗಡ ಹಣವನ್ನು ಹಿಂತಿರುಗಿಸಬೇಕೆಂತ ಆದೇಶ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ಮೇಲೆ ಪ್ರತಿವಾದಿ ನಂಃ5 ರವರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ಪ್ರತಿವಾದಿ ನಂಃ3 ರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬಾಕಿ ಉಳಿದ ಹಣವನ್ನು ತೆಗೆದುಕೊಂಡು ಪ್ರತಿವಾದಿ ನಂಃ5 ರವರ ಪರವಾಗಿ ಖರೀದಿ ಪತ್ರವನ್ನು ಮಾಡಿಕೊಡಬೇಕೆಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯ ವಿರುದ್ಧ ಪ್ರತಿವಾದಿ ನಂಃ3 ರವರು ಮೇಲ್ಮನವಿಗೆ ಹೋಗಿರುತ್ತಾರೆ ಎಂಬ ಸಂಗತಿಯನ್ನು ನನಗೆ ಪ್ರತಿವಾದಿ ನಂಃ3 ರವರು ತಿಳಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಿಂದೆ ಆಗಿರುವ ದಾವೆಗಳ ಬಗ್ಗೆ ನನಗೆ ಪ್ರತಿವಾದಿ ನಂಃ3 ರವರು ಮಾಹಿತಿ ಕೊಟ್ಟು ಅವರೇ ನನಗೆ ಸದರಿ ದಾವೆಯನ್ನು ಹೂಡಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. 2007 ನೇ ಇಸವಿಯಿಂದ ಪ್ರತಿವಾದಿ ನಂಃ3 ಮತ್ತು 5 ರವರ ಮಧ್ಯೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತಕರಾರು ಇರುತ್ತದೆ ಎಂಬ ವಿಷಯವು ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ಸದರಿ ಸಂಗತಿಯನ್ನು ಪ್ರತಿವಾದಿ ನಂಃ3 ರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿ ನಂಃ1 ರಿಂದ 4 ರವರೊಂದಿಗೆ ಮಿಲಾಫೆಯಾಗಿ ಸದರಿ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ಆದೇಶವಾಗಿದ್ದರೂ ಕೂಡಾ ಪ್ರತಿವಾದಿ ನಂಃ5 ರವರ ಹಕ್ಕು ಮುಳುಗಿಸುವ ದುರುದ್ದೇಶದಿಂದ ನಾವೆಲ್ಲರೂ ಮಿಲಾಫೆಯಾಗಿ ಸದರಿ ದಾವೆಯನ್ನು ಹೂಡಿದ್ದೇವೆ ಎಂದರೆ ಸಾಕ್ಷಿಯು ಸದರಿ ಆಸ್ತಿಯಲ್ಲಿ ನನಗೆ ಹಕ್ಕಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ5 ರವರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ನಾನು ಹಾಗೂ ಪ್ರತಿವಾದಿ ನಂಃ1 ರಿಂದ 4 ರವರು ಕೂಡಿಕೊಂಡು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ನನಗೆ ಯಾವುದೇ ವಿಷಯವು ಗೊತ್ತಿರದೇ ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೇತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ